ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

## "ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ"

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 (2ಎ) ರಡಿ]

**ವಿಷಯ: ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ - 2 ಹೋಬಳಿ, ಅದ್ದೆವಿಶ್ವನಾಥಪುರ ಗ್ರಾಮದ ಸರ್ವೆ ನಂ. 73/1 ರಲ್ಲಿ (0-18ಗು), 73/19 ರಲ್ಲಿ (0-18ಗು), 73/20 ರಲ್ಲಿ (0-24ಗು), 73/21 ರಲ್ಲಿ (0-25ಗು), 74/5 ರಲ್ಲಿ (2ಎ) ಮತ್ತು 74/16 ರಲ್ಲಿ (1ಎ-36ಗು) ಒಟ್ಟು 6ಎಕರೆ 01ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ಕೋರಿರುವ ಬಗ್ಗೆ.**

ಉಲ್ಲೇಖ :

1. **M/S NIVARA GROUP** ರ ಪರವಾಗಿ ಪಾಲುದಾರರಾದ **ಶ್ರೀ ಹರ್ಷವರ್ಧನ ರೆಡ್ಡಿ. ಬಿ** ಬಿನ್ ಬಿ. ಭಾಸ್ಕರ್‌ರೆಡ್ಡಿ, **ಶ್ರೀ ನಂದೀಶ್. ಕೆ** ಬಿನ್ ಎ. ಕೃಷ್ಣಾರೆಡ್ಡಿ ಭೂ ಮಾಲೀಕರು ಹಾಗೂ ನೋಂದಾಯಿತ ಜಿಪಿಎದಾರರು ಮತ್ತು ಜಂಟಿ ಅಭಿವೃದ್ಧಿದಾರರು [ಶ್ರೀಮತಿ/ಶ್ರೀಯುತರಾದ ಪಿ.ವಿ.ಎಸ್.ಎಸ್. ಗೋಪಾಲ ಕೃಷ್ಣರಾಜು ಬಿನ್ ವೆಂಕಟರಾಜು, ಇಂದುಮತಿ.ಪಿ ಕೋಂ ಗೋಪಾಲ ಕೃಷ್ಣಂರಾಜು ಪಿವಿಎಸ್‌ಎಸ್, ಪಿ. ಜ್ಯೋತಿ ಕೋಂ ಅಶೋಕ್ ರಾಜು.ಪಿ, ಪಿ.ಅಶೋಕ್ ರಾಜು ಬಿನ್ ಪಿ.ಎಸ್.ಎನ್.ರಾಜು, ರವರುಗಳ ಪರವಾಗಿ ನೋಂದಾಯಿತ ಜಿಪಿಎದಾರರು ಹಾಗೂ ಜಂಟಿ ಅಭಿವೃದ್ಧಿದಾರರು] ಹಾಗೂ **ಶ್ರೀ ಪ್ರದೀಪ್‌ಕುಮಾರ್ ಡಿ. ಓಸ್ವಾಲ್** ಮತ್ತು **ಶ್ರೀ ಮನೋಜ್‌ಕುಮಾರ್ ಡಿ.ಓಸ್ವಾಲ್** ಬಿನ್ ದಲಿಚಂದ್ರ ಹೆಚ್.ಒಸ್ವಾಲ್, **ಶ್ರೀ ಸೋಮರಾಮ - ಮೋಹನರೆಡ್ಡಿ** ಬಿನ್ ಪುರುಷೋತ್ತಮರೆಡ್ಡಿಸೋಮ ಇವರುಗಳು ಜಂಟಿಯಾಗಿ ಸಲ್ಲಿಸಿರುವ ಅರ್ಜಿ ದಿನಾಂಕ: 17-06-2022 ಮತ್ತು ಮನವಿ ಪತ್ರ ದಿನಾಂಕ: 02-09-2022.
2. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರಗಳು:
   - ಅ) ಸಂ. 388707 ದಿನಾಂಕ: 22-08-2022. [ಸರ್ವೆ ನಂ. 73/1 (0-18ಗು)]
   - ಆ) ಸಂ. 388711 ದಿನಾಂಕ: 22-08-2022. [ಸರ್ವೆ ನಂ. 73/19 (0-18ಗು)]
   - ಇ) ಸಂ. 388708 ದಿನಾಂಕ: 22-08-2022. [ಸರ್ವೆ ನಂ. 73/20 (0-24ಗು)]
   - ಈ) ಸಂ. 388709 ದಿನಾಂಕ: 22-08-2022. [ಸರ್ವೆ ನಂ. 73/21 (0-25ಗು)]
   - ಉ) ಸಂ. ಎಎಲ್ಎನ್ (ಎನ್.ಎ) (ಹೆಚ್.ಎ) ಎಸ್.ಆರ್/26/11-12 ದಿ:08-12-2011. [ಸರ್ವೆ ನಂ. 74/5 (2ಎ)]
   - ಊ) ಸಂ. 344432 ದಿನಾಂಕ: 15-06-2022. [ಸರ್ವೆ ನಂ. 74/16 (1ಎ-36ಗು)]
3. ದಿನಾಂಕ: 30-09-2022 ರಂದು ನಡೆದ ಪ್ರಾಧಿಕಾರದ ಇಪ್ಪತ್ತನೇ (20) ಸಭೆಯ ವಿಷಯ ಸಂಖ್ಯೆ: 20.19 ರ ನಿರ್ಣಯ.
4. ಪ್ರಾಧಿಕಾರದ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ: 06-10-2022.
5. ಅರ್ಜಿದಾರರು RBL BANK, ಬೆಂಗಳೂರು ಇಲ್ಲಿ RTGS ಮುಖಾಂತರ [RTGS UTR No. 1) RATNH22302260102, 2) RATNH22302263710, 3) RATNH22302265527, 4) RATNH22302265128 5) RATNH22302266093 ಮತ್ತು 6) RATNH22302260650] ಕ್ರಮವಾಗಿ ರೂ. 1005000/-, 610000/-, 98000/-, 98000/-, 49000/- ಮತ್ತು 488000/- ಗಳಂತೆ ಒಟ್ಟು ರೂ. 23,48,000-00 ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಇದನ್ನು ಪ್ರಾಧಿಕಾರದ ರಸೀದಿ ಸಂಖ್ಯೆ 1516 ದಿನಾಂಕ: 31-10-2022 ರಲ್ಲಿ ದಾಖಲಿಸಿದೆ.
6. ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಯಲಹಂಕ ತಾಲ್ಲೂಕು, ಯಲಹಂಕ ರವರ ಪತ್ರ ಸಂಖ್ಯೆ: ಭೂ.ಸ.ನಿ (ಯ)/ಪಿ.ಆರ್/1213/2022-23 ದಿ:04-11-2022.
7. ಪ್ರಾಧಿಕಾರದ ಸಮ ಸಂಖ್ಯೆಯ ಪತ್ರ ದಿನಾಂಕ: 17-11-2022.
8. ಅರ್ಜಿದಾರರ ಮನವಿ ಪತ್ರ ದಿನಾಂಕ: 22-11-2022.



E-mail :dpa.dbpura2018@gmail.com

Website : www.doddaballapura.tpa.gov.in

9. ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ರಾಜಾನುಕುಂಟೆ ಗ್ರಾಮ ಪಂಚಾಯಿತಿ, ಯಲಹಂಕ ತಾಲ್ಲೂಕು ರವರ ಪತ್ರ ಸಂಖ್ಯೆ: ರಾ.ಗ್ರಾ.ಪಂ. 03/2022-23 ದಿ: 17-12-2022.
10. ಉಪನೋಂದಣಾಧಿಕಾರಿಗಳು, ಗಾಂಧಿನಗರ (ಬ್ಯಾಟರಾಯನಪುರ) ರವರ 1ನೇ ಪುಸ್ತಕದ ದಸ್ತಾವೇಜು ನಂ. BYP-1-10409-2022-23 ಆಗಿ ಸಿ.ಡಿ. ನಂಬರ್ BYPD 1273 ನೇ ದ್ದರಲ್ಲಿ ದಿನಾಂಕ: 13-12-2022 ರಂದು ಉದ್ಯಾನವನ ಮತ್ತು ರಸ್ತೆ ಜಾಗಗಳ ನೋಂದಾಯಿಸಿರುವ ಪರಿತ್ಯಾಜನಾ ಪತ್ರ.
11. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 26 ಶಾಸನ 2021, ಬೆಂಗಳೂರು ದಿನಾಂಕ: 05-07-2021.

*****

ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ - 2 ಹೋಬಳಿ, ಅದ್ದೆವಿಶ್ವನಾಥಪುರ ಗ್ರಾಮದ ಸರ್ವೆ ನಂ. 73/1 ರಲ್ಲಿ (0-18ಗು), 73/19 ರಲ್ಲಿ (0-18ಗು), 73/20 ರಲ್ಲಿ (0-24ಗು), 73/21 ರಲ್ಲಿ (0-25ಗು), 74/5 ರಲ್ಲಿ (2ಎ) ಮತ್ತು 74/16 ರಲ್ಲಿ (1ಎ-36ಗು) **ಒಟ್ಟು 6ಎಕರೆ 01ಗುಂಟೆ** ವಿಸ್ತೀರ್ಣದ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆಗಾಗಿ ಉಲ್ಲೇಖ (1) ರಲ್ಲಿ **M/S NIVARA GROUP** ರ **ಪರವಾಗಿ ಪಾಲುದಾರರಾದ ಶ್ರೀ ಹರ್ಷವರ್ಧನ ರೆಡ್ಡಿ. ಬಿ** ಬಿನ್ ಬಿ. ಭಾಸ್ಕರ್‌ರೆಡ್ಡಿ, **ಶ್ರೀ ನಂದೀಶ್. ಕೆ** ಬಿನ್ ಎ. ಕೃಷ್ಣಾರೆಡ್ಡಿ ಭೂ ಮಾಲೀಕರು ಹಾಗೂ ನೋಂದಾಯಿತ ಜಿಪಿಎದಾರರು ಮತ್ತು ಜಂಟಿ ಅಭಿವೃದ್ಧಿದಾರರು [ಶ್ರೀಮತಿ/ಶ್ರೀಯುತರಾದ ಪಿ.ವಿ.ಎಸ್.ಎಸ್. ಗೋಪಾಲ ಕೃಷ್ಣರಾಜು ಬಿನ್ ವೆಂಕಟರಾಜು, ಇಂದುಮತಿ.ಪಿ ಕೋಂ ಗೋಪಾಲ ಕೃಷ್ಣಂರಾಜು ಪಿವಿಎಸ್‌ಎಸ್, ಪಿ. ಜ್ಯೋತಿ ಕೋಂ ಅಶೋಕ್ ರಾಜು.ಪಿ, ಪಿ.ಅಶೋಕ್ ರಾಜು ಬಿನ್ ಪಿ.ಎಸ್.ಎನ್.ರಾಜು, ರವರುಗಳ ಪರವಾಗಿ ನೋಂದಾಯಿತ ಜಿಪಿಎದಾರರು ಹಾಗೂ ಜಂಟಿ ಅಭಿವೃದ್ಧಿದಾರರು] ಹಾಗೂ **ಶ್ರೀ ಪ್ರದೀಪ್‌ಕುಮಾರ್ ಡಿ. ಓಸ್ವಾಲ್ ಮತ್ತು ಶ್ರೀ ಮನೋಜ್‌ಕುಮಾರ್ ಡಿ.ಓಸ್ವಾಲ್** ಬಿನ್ ದಲಿಚಂದ್ರ ಹೆಚ್.ಓಸ್ವಾಲ್, **ಶ್ರೀ ಸೋಮರಾಮಮೋಹನರೆಡ್ಡಿ** ಬಿನ್ ಪುರುಷೋತ್ತಮರೆಡ್ಡಿಸೋಮ ಇವರುಗಳು ಜಂಟಿಯಾಗಿ ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಅರ್ಜಿಯಲ್ಲಿನ, ಪೂರಕ ದಾಖಲೆಗಳಲ್ಲಿ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಉಲ್ಲೇಖ (2) ರ ಅಧಿಕೃತ ಜ್ಞಾಪನ ಪತ್ರಗಳಲ್ಲಿ 'ವಸತಿ' ಉದ್ದೇಶಕ್ಕಾಗಿ ಭೂ ಪರಿವರ್ತನೆಗೊಳಿಸಲಾಗಿರುತ್ತದೆ. ಲಗತ್ತಾಗಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಯಲಹಂಕ ತಾಲ್ಲೂಕು, ಯಲಹಂಕ ರವರು ಸದರಿ ಜಮೀನಿನ ಬಾಬ್ತು ಹೊರಡಿಸಲಾದ ಕಂದಾಯ ನಕ್ಷೆಯನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಉಲ್ಲೇಖ (3) ರ ದಿನಾಂಕ: 30-09-2022 ರಂದು ನಡೆದ ಪ್ರಾಧಿಕಾರದ ಇಪ್ಪತ್ತನೇ (20) ಸಭೆಯ ವಿಷಯ ಸಂಖ್ಯೆ: 20.19 ರಲ್ಲಿ ಮಂಡಿಸಿ ಚರ್ಚಿಸಲಾಗಿ, ನಡವಳಿಕೆಯಲ್ಲಿ ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ - 2 ಹೋಬಳಿ, ಅದ್ದೆವಿಶ್ವನಾಥಪುರ ಗ್ರಾಮದ ಸರ್ವೆ ನಂ. 73/1 ರಲ್ಲಿ (0-18ಗು), 73/19 ರಲ್ಲಿ (0-18ಗು), 73/20 ರಲ್ಲಿ (0-24ಗು), 73/21 ರಲ್ಲಿ (0-25ಗು), 74/5 ರಲ್ಲಿ (2ಎ) ಮತ್ತು 74/16 ರಲ್ಲಿ (1ಎ-36ಗು) **ಒಟ್ಟು 6ಎಕರೆ 01ಗುಂಟೆ** ವಿಸ್ತೀರ್ಣ ಪ್ರದೇಶದ "ವಸತಿ" ಉದ್ದೇಶದ ವಿನ್ಯಾಸ ನಕ್ಷೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2ಎ) ರ ಅಡಿಯಲ್ಲಿ ಅನುಮೋದಿಸಲು ತೀರ್ಮಾನಿಸಲಾಗಿರುತ್ತದೆ. ಈ ಸಂಬಂಧ ಮುಂದಿನ ಕ್ರಮವಹಿಸಿ ಉಲ್ಲೇಖ (4) ರ ಪ್ರಾಧಿಕಾರದ ಪತ್ರದಲ್ಲಿ ಶುಲ್ಕ ಪಾವತಿಸಲು ಅರ್ಜಿದಾರರಿಗೆ ತಿಳಿಸಲಾಗಿರುವಂತೆ ಉಲ್ಲೇಖ (5) ರಲ್ಲಿ ಅರ್ಜಿದಾರರು ಪ್ರಾಧಿಕಾರಕ್ಕೆ ಶುಲ್ಕಗಳನ್ನು ಪಾವತಿಸಿರುತ್ತಾರೆ. ಉಲ್ಲೇಖ (6) ರಲ್ಲಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಯಲಹಂಕ ತಾಲ್ಲೂಕು ರವರು ಪ್ರಸ್ತಾಪಿತ ಜಮೀನಿನ ಸರ್ವೆ ನಕ್ಷೆಯನ್ನು ದೃಢೀಕರಿಸಿರುತ್ತಾರೆ. ಸದರಿ ಸರ್ವೆ ನಕ್ಷೆಗನುಗುಣವಾಗಿ ರಚಿಸಲಾದ ವಿನ್ಯಾಸ ನಕ್ಷೆಯನ್ನು ಪ್ರಾಧಿಕಾರದ 20ನೇ ಸಭೆಯಲ್ಲಿ ವಲಯ ನಿಯಮಾವಳಿಗೆ ಅನುಗುಣವಾಗಿ ವಿನ್ಯಾಸವನ್ನು ಮಾರ್ಪಡಿಸಲು ತೀರ್ಮಾನಿಸಿರುವಂತೆ, ಸೂಕ್ತ ತಿದ್ದುಪಡಿಗಳನ್ನು ಅಳವಡಿಸಿ ಉಲ್ಲೇಖ (7) ರಲ್ಲಿ ಸ್ಥಳದಲ್ಲಿ ಅಳತೆಗಳನ್ನು ಅಳವಡಿಸಲು Demarcation ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ.

ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

ಮುಂದುವರೆದು, ಉಲ್ಲೇಖ (8) ರ ಮನವಿ ಪತ್ರದಲ್ಲಿ ಅರ್ಜಿದಾರರು ಸ್ಥಳದಲ್ಲಿ ಗಡಿಗುರುತು (Demarcation) ಕಾರ್ಯವನ್ನು ಪೂರ್ಣಗೊಳಿಸಲಾಗಿದ್ದು, ಸ್ಥಳದಲ್ಲಿ ಅಭಿವೃದ್ಧಿ ಕಾರ್ಯವನ್ನು ಮುಂದುವರೆಸಬೇಕಾಗಿರುವುದರಿಂದ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ಕೋರಿರುತ್ತಾರೆ. ಅರ್ಜಿದಾರರ ಕೋರಿಕೆಯನ್ವಯ ಮುಂದಿನ ಕ್ರಮವಹಿಸಲಾಗಿ, ಉಲ್ಲೇಖ (9) ರ ಪತ್ರದಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ರಾಜಾನುಕುಂಟೆ ಗ್ರಾಮ ಪಂಚಾಯಿತಿ, ಯಲಹಂಕ ತಾಲ್ಲೂಕು ರವರು ವಿನ್ಯಾಸ ನಕ್ಷೆಯಲ್ಲಿ ಅಳವಡಿಸಲಾದ ಸಾರ್ವಜನಿಕ ಉಪಯೋಗದ ಉದ್ಯಾನವನ ಮತ್ತು ರಸ್ತೆಗಳ ಜಾಗಗಳನ್ನು ರಾಜಾನುಕುಂಟೆ ಗ್ರಾಮ ಪಂಚಾಯ್ತಿಗೆ ಉಲ್ಲೇಖ (10) ರ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಲಾಗಿರುತ್ತದೆಂದು ವರದಿ ನೀಡಿರುತ್ತಾರೆ. ಆದುದರಿಂದ, ಮೇಲಿನ ಎಲ್ಲಾ ಉಲ್ಲೇಖಿತ ಅಂಶಗಳನ್ವಯ ಈ ಕೆಳಗಿನಂತೆ ಪ್ರಸ್ತಾವನೆಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಿ ಆದೇಶಿಸಲಾಗಿದೆ.

## ಆದೇಶ

**ಸಂಖ್ಯೆ: DPA/TP/LAO/07/2022-23**/1125

**ದಿನಾಂಕ:** 20 DEC 2022

ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ - 2 ಹೋಬಳಿ, ಅದ್ದೆವಿಶ್ವನಾಥಪುರ ಗ್ರಾಮದ ಸರ್ವೆ ನಂ. 73/1 ರಲ್ಲಿ (0-18ಗು), 73/19 ರಲ್ಲಿ (0-18ಗು), 73/20 ರಲ್ಲಿ (0-24ಗು), 73/21 ರಲ್ಲಿ (0-25ಗು), 74/5 ರಲ್ಲಿ (2ಎ) ಮತ್ತು 74/16 ರಲ್ಲಿ (1ಎ-36ಗು) **ಒಟ್ಟು 6ಎಕರೆ 01ಗುಂಟೆ** ವಿಸ್ತೀರ್ಣದ ನಕ್ಷೆಯ ಭೂ ಉಪಯೋಗ ವಿಶ್ಲೇಷಣೆಯಲ್ಲಿ ವಸತಿಗಾಗಿ ವಿಸ್ತೀರ್ಣ - 12027.95 ಚ.ಮೀ (49.33%), ವಾಣಿಜ್ಯಕ್ಕಾಗಿ ವಿಸ್ತೀರ್ಣ - 558.72 ಚ.ಮೀ (2.29%), ಉದ್ಯಾನವನ ವಿಸ್ತೀರ್ಣ - 729.93 ಚ.ಮೀ (2.99%) ಮತ್ತು ರಸ್ತೆಗಳಿಗಾಗಿ ವಿಸ್ತೀರ್ಣ - 11065.37 ಚ.ಮೀ (45.39%) ಯೊಂದಿಗೆ ವಿವಿಧ ಅಳತೆಯ ನಿವೇಶನಗಳಲ್ಲಿ ಅಳತೆ - 9.14 ಮೀ. x 12.19ಮೀ. ನ ಐವತ್ತು (50), ವಾಣಿಜ್ಯ ನಿವೇಶನ ಒಂದು (01) ಮತ್ತು ಅನಿಯತ ಅಳತೆಯಲ್ಲಿ ನಲವತ್ತಾರು (46) **ಒಟ್ಟು ತೊಂಬತ್ತೇಳು (97)** ನಿವೇಶನಗಳನ್ನು ಅಳವಡಿಸಿ, ಪ್ರಸ್ತಾಪಿತ ಪ್ರದೇಶದಲ್ಲಿ ಕಂದಾಯ ನಕ್ಷೆಯಂತೆ ಗಡಿ ಗುರುತುಗಳೊಂದಿಗೆ, ಮೂಲಭೂತ ಸೌಕರ್ಯಗಳಾದ ನಾಲೆಗಳು, ಒಳಚರಂಡಿ, ರಸ್ತೆ, ಮೋರಿ ನಿರ್ಮಾಣ, ವಿದ್ಯುತ್ ಸರಬರಾಜು ವ್ಯವಸ್ಥೆ ಹಾಗೂ ನೀರು ಸರಬರಾಜು ವ್ಯವಸ್ಥೆ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಸಂಬಂಧಪಟ್ಟ ಇಲಾಖಾ ನಿಯಮಾವಳಿಗನುಗುಣವಾಗಿ ಅಭಿವೃದ್ಧಿಪಡಿಸಲು ಹಾಗೂ ರಸ್ತೆ ಪಂಕ್ತೀಕರಣಗೊಳಿಸಿ, ಉದ್ಯಾನವನ, ನಾಗರೀಕ ಸೌಲಭ್ಯ ಪ್ರದೇಶಗಳನ್ನು ಗುರುತಿಸಿ ಸೂಕ್ತ ಫೆನ್ಸಿಂಗ್‌ನೊಂದಿಗೆ ಸಂರಕ್ಷಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 (2ಎ) ರ ಅಡಿಯಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಿದೆ.

## ಷರತ್ತುಗಳು

1) ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಮೂರು (03) ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಸತಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.

2) ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಅಭಿವೃದ್ಧಿ ಕಾರ್ಯಗಳಾದ ರಸ್ತೆ ನಿರ್ಮಾಣ, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಒಳಚರಂಡಿಗಳ ನಿರ್ಮಾಣ, ಮೋರಿ ನಿರ್ಮಾಣ, ಪಾದಾಚಾರಿ ವ್ಯವಸ್ಥೆ, ಬೀದಿದೀಪದ ವ್ಯವಸ್ಥೆ ಮತ್ತು ಕುಡಿಯುವ ನೀರು ಸರಬರಾಜು ವ್ಯವಸ್ಥೆಗಳನ್ನೊಳಗೊಂಡ ನಿವೇಶನಗಳು, ರಸ್ತೆ ಪಂಕ್ತೀಕರಣ, ಉದ್ಯಾನ ಹಾಗೂ ನಾಗರೀಕ ಸೌಲಭ್ಯ ಪ್ರದೇಶದ ಅಭಿವೃದ್ಧಿ ಮತ್ತು ಸಂರಕ್ಷಿಸಿ ಮೂಲ ಸೌಕರ್ಯಗಳನ್ನು ಸಂಬಂಧಪಟ್ಟ ಇಲಾಖಾ ನಿಯಮಾವಳಿಗಳಂತೆ ಅಭಿವೃದ್ಧಿಪಡಿಸಲು ತಾತ್ಕಾಲಿಕವಾಗಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ.



E-mail :dpa.dbpura2018@gmail.com

Website : www.doddaballapura.tpa.gov.in

3) ಮೂಲಭೂತ ಅಭಿವೃದ್ಧಿ ಕಾಮಗಾರಿಗಳನ್ನು ಅನುಮೋದಿತ ತಾತ್ಕಾಲಿಕ ವಿನ್ಯಾಸ ನಕ್ಷೆಯಂತೆ ಸಂಬಂಧಪಟ್ಟ ಪ್ರಾಧಿಕಾರದ/ಮಂಡಳಿ/ಇಲಾಖೆಯ ಮೇಲ್ವಿಚಾರಣೆಯ ಅಡಿಯಲ್ಲಿ ಪೂರ್ಣಗೊಳಿಸತಕ್ಕದ್ದು. ಸದರಿ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳಿಸಿದ್ದಕ್ಕಾಗಿ ಸಂಬಂಧಪಟ್ಟ ಪ್ರಾಧಿಕಾರ/ಮಂಡಳಿ/ಇಲಾಖೆಯಿಂದ ಸ್ಥಳದಲ್ಲಿ ಅಭಿವೃದ್ಧಿ ಕಾಮಗಾರಿ ಮುಕ್ತಾಯ ಪತ್ರವನ್ನು ಪಡೆದು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ಕಡ್ಡಾಯವಾಗಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 17 (2ಬಿ) ರಂತೆ ಸದರಿ ನಕ್ಷೆಗೆ ಅಂತಿಮ ಅನುಮೋದನೆ ಪಡೆಯದ ಹೊರತಾಗಿ ನಿವೇಶನಗಳನ್ನು ಪರಭಾರೆ ಮಾಡತಕ್ಕದ್ದಲ್ಲ.**

4) ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯ ರೀತ್ಯ ಅನುಮೋದನೆ ನೀಡಿದ ಮೂರು (03) ವರ್ಷಗಳೊಳಗಾಗಿ ಸಂಪೂರ್ಣವಾಗಿ ಉದ್ಯಾನವನಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕಗಳನ್ನು ಅಭಿವೃದ್ಧಿಪಡಿಸತಕ್ಕದ್ದು.

5) RERA ನೋಂದಣಿ ಪಡೆದು ಮೊದಲ ಹಂತದ ಶೇ 40 ರಷ್ಟು ನಿವೇಶನಗಳ ಬಿಡುಗಡೆಗೆ ಅರ್ಜಿ ಸಲ್ಲಿಸತಕ್ಕದ್ದು.

**6) ವಸತಿ ವಿನ್ಯಾಸದ ಗಡಿ ನಿರ್ಧಾರ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ವಿನ್ಯಾಸದಲ್ಲಿನ ನಿವೇಶಗಳನ್ನು ಪರಭಾರೆ ಮಾಡುವುದಾಗಲೀ ಮತ್ತು ಖಾತೆ ತೆರೆಯುವುದಾಗಲೀ ಮಾಡತಕ್ಕದ್ದಲ್ಲ ಹಾಗೂ ನಿವೇಶನಗಳಲ್ಲಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ಅಥವಾ ಪರವಾನಿಗೆ ಹೊರಡಿಸತಕ್ಕದ್ದಲ್ಲ.**

7) ಪ್ರಶ್ನಿತ ಜಮೀನಿನಲ್ಲಿ ಸರ್ಕಾರಿ ಖರಾಬು ಜಾಗವನ್ನು ಯಥಾವತ್ತಾಗಿ ಕಾಯ್ದಿರಿಸತಕ್ಕದ್ದು ಹಾಗೂ ಈ ಜಾಗವನ್ನು ಒತ್ತುವರಿ ಮಾಡುವುದು ಅಥವಾ ಇತರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

8) ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಸರ್ಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

9) ಈ ಅನುಮೋದನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಡಿಯಲ್ಲಿ ನೀಡಲಾಗಿದ್ದು, ಜಮೀನಿನ ಮೇಲಿನ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸತಕ್ಕದ್ದಲ್ಲ.

10) ವಿನ್ಯಾಸದಲ್ಲಿ ಅಳವಡಿಸಲಾದ ನಿವೇಶನದಲ್ಲಿ ಕಡ್ಡಾಯವಾಗಿ ಯಾವುದೇ ಉಪವಿಭಜನೆ ಮಾಡಿ ಮಾರಾಟ ಮಾಡತಕ್ಕದ್ದಲ್ಲ, ಒಂದು ವೇಳೆ ಯಾವುದೇ ಬದಲಾವಣೆಯ ಅವಶ್ಯಕವಿದ್ದಲ್ಲಿ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೇ ಯಾವುದೇ ಬದಲಾವಣೆ ಮಾಡತಕ್ಕದ್ದಲ್ಲ.

11) ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವು ಕಾಲಕಾಲಕ್ಕೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ತಗಲುವ ಶುಲ್ಕಗಳನ್ನು ಪಾವತಿಸುವ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.

12) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಾಗಿ ಸಂಬಂಧಿಸಿದ ರಸ್ತೆ, ರಸ್ತೆಬದಿ ಚರಂಡಿ, ಕಲ್ವರ್ಟ್‌ಗಳು, ಪಾದಚಾರಿ ಮಾರ್ಗ ಇತ್ಯಾದಿ ಸಿವಿಲ್ ಕಾಮಗಾರಿಗಳನ್ನು ಸಂಬಂಧಿತ ಲೋಕೋಪಯೋಗಿ ಇಲಾಖೆ/ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ನಗರ ಸ್ಥಳೀಯ ಸಂಸ್ಥೆಯ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ, ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

13) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಾಗಿ ಸಂಬಂಧಿಸಿದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಾಮಗಾರಿಗಳನ್ನು ಸಂಬಂಧಿತ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

14) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ವಿದ್ಯುದ್ಧೀಕರಣ ಸಂಪರ್ಕ ಕಾಮಗಾರಿಗಳನ್ನು ಸಂಬಂಧಿತ ಬೆಸ್ಕಾಂ ಮಂಡಳಿ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ದೃಢೀಕರಣ ಪತ್ರ ಸಲ್ಲಿಸತಕ್ಕದ್ದು.

15) ಪ್ರಸ್ತಾಪಿತ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವರ್ಗಗಳಲ್ಲಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

16) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯಲ್ಲಿ ಅಳವಡಿಸಲಾದ ಉದ್ಯಾನವನ ಅಭಿವೃದ್ಧಿಯನ್ನು ತೋಟಗಾರಿಕಾ ಇಲಾಖೆಯ ಉಸ್ತುವಾರಿಯಲ್ಲಿ ಅಭಿವೃದ್ಧಿಗೊಳಿಸಿ ಅಭಿವೃದ್ಧಿ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

17) ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ಖಾಲಿ ಜಾಗಗಳಿಗೆ ಹೊರಸೂಸದಂತೆ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಕೆ ಮಾಡತಕ್ಕದ್ದು.

18) ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳೆಸಿ ಅಭಿವೃದ್ಧಿಪಡಿಸುವುದು ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು, ಹೊರತಾಗಿ ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸತಕ್ಕದ್ದಲ್ಲ. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಕಡೆ ಗಿಡ/ಮರಗಳನ್ನು ಬೆಳೆಸುವುದು.

19) ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

20) ವಿನ್ಯಾಸದಲ್ಲಿ ಅಳವಡಿಸಲಾದ ರಸ್ತೆಗಳು ಸಾರ್ವಜನಿಕ ರಸ್ತೆಗಳಾಗಿದ್ದು, ಅಕ್ಕ-ಪಕ್ಕದ ಜಮೀನುಗಳಿಗೆ ಸದರಿ ರಸ್ತೆಗಳಿಂದ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

21) ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯಗಳು ಹಾಗೂ ಇತರೆ ನ್ಯಾಯಾಲಯ ಪ್ರಕರಣಗಳಿಗೆ ಅರ್ಜಿದಾರರೇ ನೇರ ಹೊಣೆಗಾರರಾಗಿರುತ್ತಾರೆ. ಹೊರತಾಗಿ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

22) ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲೀಕತ್ವ ದಾಖಲಾತಿಗಳ ಬಗ್ಗೆ ಅರ್ಜಿದಾರರು ಯಾವುದೇ ಸತ್ಯಾಂಶಗಳನ್ನು ಮರೆಮಾಚಿ, ಅನಧಿಕೃತ ದಾಖಲೆಗಳ ಮೇಲೆ ಈ ಅನುಮೋದನೆ ಪಡೆದಿರುವುದು ಸ್ಪಷ್ಟಪಟ್ಟಲ್ಲಿ, ನೀಡಿರುವ ಅನುಮೋದನೆಯು ತನ್ನಿಂತಾನೆ ರದ್ದುಗೊಳ್ಳುತ್ತದೆ. ಹಾಗೂ ಇದಕ್ಕೆ ಯೋಜನಾ ಪ್ರಾಧಿಕಾರವು ಯಾವುದೇ ರೀತಿಯಲ್ಲಿಯೂ ಜವಾಬ್ದಾರಿಯಾಗಿರುವುದಿಲ್ಲ. ಹೊರತಾಗಿ ಪೂರ್ಣ ಹೊಣೆಗಾರಿಕೆ ಅರ್ಜಿದಾರರದ್ದಾಗಿರುತ್ತದೆ.

23) ಮೇಲಿನಂತೆ ನೀಡಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

24) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 209 ಬಿಎಂಆರ್ 2016, ದಿನಾಂಕ: 31.03.2017 ರ ರೀತ್ಯ ಪತ್ರಿಕೆ, ಮಾಧ್ಯಮ, ಜಾಹೀರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಪಡೆದುಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು.

25) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಚಿಸಿರುವ Direction under section 18(1)(b) of Water (Prevention & Control of Pollution) Act, 1974ರ ಕಾಯ್ದೆಯಲ್ಲಿ ರೂಪಿಸಿರುವ ನಿಯಮದಂತೆ ಕ್ರಮ ಕೈಗೊಳ್ಳಲು ಸೂಚಿರುವಂತೆ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

i. ರಾಜ ಕಾಲುವೆಯನ್ನು ಮುಚ್ಚದಂತೆ ಕ್ರಮವಹಿಸುವುದು.

ii. ರಾಜಕಾಲುವೆಗಳಿಗೆ ಯಾವುದೇ ಕೊಳಚೆ ನೀರು ಹಾಗೂ ಇನ್ನಿತರೆ ತ್ಯಾಜ್ಯ ವಸ್ತುಗಳು ಸೇರ್ಪಡೆಯಾಗದಂತೆ ಕ್ರಮವಹಿಸುವುದು.

iii. ಕಂದಾಯ ಇಲಾಖೆಯ ದಾಖಲೆಗಳಂತೆ ಇರುವ ರಾಜ ಕಾಲುವೆಗಳ ಅಳತೆಗಳನ್ನು ಅತಿಕ್ರಮ/ಒತ್ತುವರಿ ಆಗದಂತೆ ಯಥಾವತ್ತಾಗಿ ಕಾಯ್ದಿರಿಸಿಕೊಂಡು ಸರಾಗವಾಗಿ ನೀರು ಹರಿಯಲು ಬೇಕಾದ ಕ್ರಮವಹಿಸುವುದು.

iv. ರಾಜ ಕಾಲುವೆಗಳು Silt ಆಗದಂತೆ ಹಾಗೂ ತೆರೆದ ಸ್ಥಿತಿಯಲ್ಲಿ ಸ್ವಚ್ಛವಾಗಿರುವಂತೆ ಕ್ರಮವಹಿಸುವುದು.

26) ಉಲ್ಲೇಖ (II) ರ ಅಧಿಸೂಚನೆಯಂತೆ ಹಾಗೂ ವಲಯ ನಿಯಮಾವಳಿಗಳಂತೆ ಪೂರಕ ದಾಖಲಾತಿಗಳನ್ನು ಸಲ್ಲಿಸಿ, ನಿವೇಶನಗಳನ್ನು ಬಿಡುಗಡೆಗೊಳಿಸಿಕೊಳ್ಳತಕ್ಕದ್ದು.

ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಪ್ರಾಧಿಕಾರವು ವಿಧಿಸಿರುವ ಇತರೆ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ಹೊರಡಿಸಿರುವ ಅನುಮೋದನೆಯು ಮಂಜೂರಾತಿಯು ಕೂಡಲೇ ರದ್ದಾಗುವುದು.

20/12/2022

ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
ದೊಡ್ಡಬಳ್ಳಾಪುರ. 20-12-22

__ಲಗತ್ತು:__ ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಮಾತ್ರ ನೀಡಲಾಗಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ.

**ಇವರಿಗೆ,**

**M/S NIVARA GROUP ರ ಪರವಾಗಿ ಪಾಲುದಾರರಾದ**
ಶ್ರೀ **ಹರ್ಷವರ್ಧನ ರೆಡ್ಡಿ. ಬಿ** ಬಿನ್ ಬಿ. ಭಾಸ್ಕರ್‌ರೆಡ್ಡಿ,
ಶ್ರೀ **ನಂದೀಶ್**. ಕೆ ಬಿನ್ ಎ. ಕೃಷ್ಣಾರೆಡ್ಡಿ ಭೂ ಮಾಲೀಕರು
ಹಾಗೂ ನೋಂದಾಯಿತ ಜಿಪಿಎದಾರರು ಮತ್ತು ಜಂಟಿ ಅಭಿವೃದ್ಧಿದಾರರು
[ಶ್ರೀಮತಿ/ಶ್ರೀಯುತರಾದ ಪಿ.ವಿ.ಎಸ್.ಎಸ್. ಗೋಪಾಲ ಕೃಷ್ಣರಾಜು ಬಿನ್ ವೆಂಕಟರಾಜು,
ಇಂದುಮತಿ.ಪಿ ಕೋಂ ಗೋಪಾಲ ಕೃಷ್ಣಂರಾಜು ಪಿವಿಎಸ್‌ಎಸ್,
ಪಿ. ಜ್ಯೋತಿ ಕೋಂ **ಅಶೋಕ್** ರಾಜು.ಪಿ, ಪಿ.ಅಶೋಕ್ ರಾಜು ಬಿನ್ ಪಿ.ಎಸ್.ಎನ್.ರಾಜು
ರವರುಗಳ ಪರವಾಗಿ ನೋಂದಾಯಿತ ಜಿಪಿಎದಾರರು ಹಾಗೂ ಜಂಟಿ ಅಭಿವೃದ್ಧಿದಾರರು]
ಹಾಗೂ ಶ್ರೀ **ಪ್ರದೀಪ್‌ಕುಮಾರ್** ಡಿ. **ಓಸ್ವಾಲ್ ಮತ್ತು**
ಶ್ರೀ **ಮನೋಜ್‌ಕುಮಾರ್** ಡಿ.**ಓಸ್ವಾಲ್** ಬಿನ್ ದಲಿಚಂದ್ರ ಹೆಚ್.ಒಸ್ವಾಲ್,
ಶ್ರೀ **ಸೋಮರಾಮಮೋಹನರೆಡ್ಡಿ** ಬಿನ್ ಪುರುಷೋತ್ತಮರೆಡ್ಡಿಸೋಮ
No. 603/A, 4th Main, 16th Cross,
BEML Layout, ITPL Main Road,
Thubarahalli, Bangalore – 560066.

# ONLY FOR THE DEVELOPMENT PURPOSE




| ODD SITE DIMENTION | | |
|---|---|---|
| SL.NO | SITE.NO | AREA IN (SQM) |
| 1 | 1 | 167.18 |
| 2 | 2 | 121.41 |
| 3 | 3 | 113.18 |
| 4 | 4 | 104.96 |
| 5 | 5 | 96.73 |
| 6 | 6 | 88.60 |
| 7 | 7 | 202.17 |
| 8 | 8 | 380.21 |
| 9 | 9 | 240.38 |
| 10 | 10 | 122.52 |
| 11 | 11 | 121.94 |
| 12 | 12 | 121.35 |
| 13 | 13 | 120.76 |
| 14 | 14 | 120.17 |
| 15 | 15 | 119.58 |
| 16 | 16 | 119.00 |
| 17 | 17 | 118.41 |
| 18 | 18 | 117.82 |
| 19 | 19 | 117.23 |
| 20 | 20 | 116.65 |
| 21 | 21 | 116.06 |
| 22 | 22 | 103.49 |
| 23 | 27 | 128.38 |
| 24 | 34 | 146.22 |
| 25 | 35 | 129.86 |
| 26 | 40 | 105.61 |
| 27 | 41 | 114.70 |
| 28 | 46 | 135.03 |
| 29 | 47 | 137.64 |
| 30 | 52 | 119.28 |
| 31 | 53 | 126.37 |
| 32 | 58 | 142.82 |
| 33 | 59 | 146.43 |
| 34 | 64 | 132.96 |
| 35 | 65 | 142.05 |
| 36 | 70 | 150.60 |
| 37 | 71 | 153.21 |
| 38 | 76 | 146.63 |
| 39 | 77 | 156.73 |
| 40 | 82 | 156.60 |
| 41 | 83 | 155.50 |
| 42 | 88 | 137.34 |
| 43 | 91 | 153.30 |
| 44 | 92 | 152.19 |
| 45 | 95 | 174.15 |
| 46 | 96 | 164.82 |
| TOTAL | | 6467.12 |

| PARK DETAILS | |
|---|---|
| SLNO | AREA SQM |
| PARK-1 | 303.98 |
| PARK-2 | 174.01 |
| PARK-3 | 251.94 |
| TOTAL | 729.93 |

SANCTIONING AUTHORITY

ದಿನಾಂಕ :30-09-2022ರಂದು ನಡೆದ ....20....ನೇ ಸಭೆಯ ನಡವಳಿಕೆ ಸಂಖ್ಯೆ:....20.19....ರ ಮೇರೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2A)ರ ಅಡಿಯಲ್ಲಿ ಪತ್ರ ಸಂಖ್ಯೆ: DPA/TP/LAO/ 07 / 2022-23 ದಿನಾಂಕ: 20/12/2022ರಲ್ಲಿನ ಷರತ್ತುಗಳಿಗೆ ಒಳಪಟ್ಟು ವಸತಿ/ವಸತಿಯೇತರ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

ಸದಸ್ಯ ಕಾರ್ಯದರ್ಶಿಗಳು
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

## PLOT DETAILS

| SL NO | PLOT SIZE | NO. OF SITE |
|---|---|---|
| 1 | 9.14M X 12.19M | 50 |
| 2 | ODD SITES * | 46 |
| 3 | Commercial | 01 |
| | TOTAL | 97 |

## LEGENDS

- LAYOUT BOUNDARY
- REVENUE BOUNDARY
- GROUND LEVEL STORAGE RESERVOIR (GLSR)
- SEWERAGE TREATMENT PLANT (STP)

## AREA STATEMENT

| SL.NO | VILLAGE | SY.NO | AREA IN ACRE | AREA IN GUNTA | KHARAB GUNTA | CONVERSION ORDER |
|---|---|---|---|---|---|---|
| 1 | ADDEVISHWANATHAPURA | 73/1 | 00 | 18 | 00 | NO:-388707 Dtd:-22-08-2022 |
| 2 | | 73/19 | 00 | 18 | 00 | NO:-388711 Dtd:-22-08-2022 |
| 3 | | 73/20 | 00 | 24 | 00 | NO:-388708 Dtd:-22-08-2022 |
| 4 | | 73/21 | 00 | 25 | 00 | NO:-388709 Dtd:-22-08-2022 |
| 5 | | 74/5 | 02 | 00 | 04 | [illegible] |
| 6 | | 74/16 | 01 | 36 | 00 | NO:-344432 Dtd:-15-06-2022 |
| | TOTAL | | 06 | 01 | 04 | |

## LAND USE ANALYSIS

TOTAL AREA- 06ACRES 01GUNTAS (24,381.97 Sq.mt)

| LAND USE | AREA IN SQ.M | % | |
|---|---|---|---|
| RESIDENTIAL | 12,027.95 | 49.33 | 51.62 |
| COMMERCIAL | 558.72 | 2.29 | |
| PARK | 729.93 | 2.99 | |
| ROAD | 11,065.37 | 45.39 | |
| TOTAL | 24,381.97 | 100.00 | |

OWNER'S
For M/s Nivara Group
Partners

M/s.NIVARA GROUP & OTHERS

ENGINEER

SRIKANTH C.N
BCC/BL/3.6.1-4449/2019-20

TITLE
DRAFT RESIDENTIAL LAYOUT PLAN
IN SY.No. 73/1,73/19,73/20,73/21,74/5 & 74/16 OF
ADDEVISHWANATHAPURA VILLAGE
HESARGHATTA HOBLI,
BANGALORE NORTH TALUK,